ಬಿ.ಎಂ.ಚಂದ್ರಯ್ಯ ಅಧ್ಯಕ್ಷತೆಯಲ್ಲಿ ಸ್ಥಾಪನೆಗೊಂಡ ಗೊಮ್ಮಟಗಿರಿ ಕ್ಷೇತ್ರ ಸೇವಾ ಸಮಿತಿ 1950ರ ನ.10ರಂದು ಮೊದಲ ಮಸ್ತಕಾಭಿಷೇಕ ನಡೆಸಿತ್ತು. ಇದೀಗ ನಡೆಯಲಿರುವುದು 70ನೇಯದ್ದು.



ಮಸ್ತಕಾಭಿಷೇಕದಲ್ಲಿ ಮಿಂದ ಬಾಹುಬಲಿ (ಸಂಗ್ರಹ ಚಿತ್ರ)

# ಗೊಮ್ಮಟನಿಗೆ ಮಸ್ತಕಾಭಿಷೇಕ ನಾಳೆ

ಡಿ.ಬಿ.ನಾಗರಾಜ

ಹುಣಸೂರು ತಾಲ್ಲೂಕಿನ ಬೆಟ್ಟದೂರಿನ ಗೊಮ್ಮಟಗಿರಿಯ ಬಾಹುಬಲಿ ಮೂರ್ತಿ ಮಸ್ತಕಾಭಿಷೇಕಕ್ಕೆ ಸಜ್ಜುಗೊಂಡಿದೆ. ನ.24ರ ಭಾನುವಾರ ನಡೆಯಲಿರುವ ಮಸ್ತಕಾಭಿಷೇಕ 70ನೇಯದ್ದು.

ವರ್ಷಧಾರೆಗೆ ನೆನೆದು, ಬಿಸಿಲಿಗೆ ಮೈಯೊಡ್ಡಿ ನಿಂತಿರುವ ಬಾಹುಬಲಿ ಮೂರ್ತಿಗೆ 17ಕ್ಕೂ ಹೆಚ್ಚು ತರಹದ ಮಂಗಳ ದ್ರವ್ಯಗಳಿಂದ ಅಭಿಷೇಕ ನೆರವೇರಿಸಲು, ಗೊಮ್ಮಟಗಿರಿ ಕ್ಷೇತ್ರ ಸೇವಾ ಸಮಿತಿ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಅಜಾನುಬಾಹು ಬಾಹುಬಲಿಗೆ ಜೈನ ಸಮುದಾಯದ ಧಾರ್ಮಿಕ ಸಂಪ್ರದಾಯ, ವಿಧಿ-ವಿಧಾನಗಳಂತೆ ಮಸ್ತಕಾಭಿಷೇಕ ನಡೆಯಲಿದ್ದು, ಪ್ರತಿ ವರ್ಷದಂತೆ ಈ ಬಾರಿಯೂ ಸಹ ಎಲ್ಲವೂ ಚಾಚೂ ತಪ್ಪದಂತೆ ನಡೆಯಲಿವೆ. ಈಗಾಗಲೇ ಗೊಮ್ಮಟಗಿರಿ ಬಳಿ ಜಾತ್ರೆಯ ವಾತಾವರಣ ನಿರ್ಮಾಣಗೊಂಡಿದೆ.

ವಿವಿಧ ಭಾಗಗಳಲ್ಲಿರುವ ಜೈನ ಸಮುದಾಯದ ಜನರು, ಕೆಲ ಜೈನ ಮುನಿಗಳು ಬೆಟ್ಟದೂರಿನತ್ತ ಬರುತ್ತಿದ್ದಾರೆ. ಸ್ಥಳೀಯ ಗ್ರಾಮಸ್ಥರು ತಮ್ಮೂರ ಜಾತ್ರೆಯಂತೆ ಸಂಭ್ರಮಿಸಿ, ಮಸ್ತಕಾಭಿಷೇಕದ ಪೂರ್ವ ಸಿದ್ಧತೆಯಲ್ಲಿ ತಲ್ಲೀನರಾಗಿದ್ದಾರೆ.

## ಶತಮಾನದ ಐತಿಹ್ಯ

ಮೈಸೂರು ನಗರದಿಂದ ಅಂದಾಜು 20 ಕಿ.ಮೀ. ದೂರದಲ್ಲಿರುವ ಬೆಟ್ಟದೂರಿನ ಗೊಮ್ಮಟಗಿರಿಯಲ್ಲಿರುವ ಬಾಹುಬಲಿಗೆ ಶತ ಶತಮಾನದ ಐತಿಹ್ಯವಿದೆ. 18 ಅಡಿ ಎತ್ತರದ ಬಾಹುಬಲಿ ಮೂರ್ತಿಯನ್ನು ಗಂಗರಸರು ಪ್ರತಿಷ್ಠಾಪಿಸಿದ್ದಾರೆ ಎಂಬ ಪ್ರತೀತಿಯಿದೆ.

ಬೆಟ್ಟದೂರಿನ ಬಾಹುಬಲಿ ಕುರಿತಂತೆ ಯಾವುದೇ ನಿಖರ ಐತಿಹ್ಯ ದಾಖಲೆಗಳಿಲ್ಲ. ಎರಡು ಶಾಸನಗಳು ದೊರೆತಿದ್ದರೂ; ಅಕ್ಷರಗಳನ್ನು ಗುರುತಿಸಲು ಸಾಧ್ಯವಾಗದಷ್ಟು ಸವೆದಿರುವುದರಿಂದ ಇತಿಹಾಸ ಸ್ಪಷ್ಟವಿಲ್ಲ.

1950ರಲ್ಲಿ ಕ್ಷೇತ್ರ ಜೀರ್ಣೋದ್ಧಾರಗೊಂಡಿದೆ. ಆಗಿನಿಂದಲೂ ಮಸ್ತಕಾಭಿಷೇಕದ ಧಾರ್ಮಿಕ ವಿಧಿ-ವಿಧಾನ ತಪ್ಪದೇ ನಡೆದಿದೆ. ಮಸ್ತಕಾಭಿಷೇಕದಲ್ಲಿ ಭಾಗಿಯಾಗುವ ಭಕ್ತ ಸಮೂಹಕ್ಕೆ ದಾಸೋಹ, ಕುಡಿಯುವ ನೀರಿನ ವ್ಯವಸ್ಥೆಯನ್ನು ಸಮಿತಿ ಮಾಡುತ್ತಿದೆ.

ಬಾಹುಬಲಿಯ ಮಸ್ತಕಾಭಿಷೇಕಕ್ಕೆ ಚಾಲನೆ ಸಿಗುತ್ತಿದ್ದಂತೆ, ಮೊದಲು ಅರ್ಪಿಸುವ ಮಂಗಳಕಳಶಗಳು ಈಗಾಗಲೇ ಬಿಕರಿಯಾಗಿವೆ. 17 ತರಹದ ಮಂಗಳದ್ರವ್ಯಗಳನ್ನು ಜೈನ ಸಮುದಾಯದ ಭಕ್ತ ಸಮೂಹ ಖರೀದಿಸಿದೆ. ಮೊದಲ ಮಂಗಳಕಳಶ ₹ 11,000ಕ್ಕೆ ಮಾರಾಟವಾಗಿದೆ ಎಂದು ದಿಗಂಬರ ಜೈನ ಸಮಾಜದ ಅಧ್ಯಕ್ಷ ಎಂ.ಆರ್.ಸುನೀಲ್‌ಕುಮಾರ್ ಮಾಹಿತಿ ನೀಡಿದರು.

ಮೊದಲಿಗೆ 108 ಮಂಗಳಕಳಶಭಿಷೇಕ (ಜಲಾಭಿಷೇಕ), ತಲಾ 6 ಕೊಡ ಎಳನೀರು, ಕಬ್ಬಿನ ಹಾಲು, 120 ಲೀಟರ್ ಹಾಲು, ಅರಿಶಿಣ, ಚಂದನ, ಶ್ರೀಗಂಧ, ಕಷಾಯ ಅಭಿಷೇಕ ಸೇರಿದಂತೆ ವಿವಿಧ ಮಂಗಳದ್ರವ್ಯಗಳಿಂದ ಬಾಹುಬಲಿ ಮೂರ್ತಿಗೆ ಮಜ್ಜನ ನೆರವೇರಿಸಲಾಗುವುದು. ನಂತರ ಪುಷ್ಪವೃಷ್ಟಿ, ಮಹಾಮಂಗಳಾರತಿಯೊಂದಿಗೆ ಪೂಜಾಕಾರ್ಯ ಸಂಪನ್ನಗೊಳ್ಳಲಿದೆ. 5ಸಾವಿರಕ್ಕೂ ಹೆಚ್ಚು ಜನರು ಭಾಗಿಯಾಗುವ ನಿರೀಕ್ಷೆಯಿದೆ ಎಂದು ಪೂಜಾ ಸಮಿತಿ ಅಧ್ಯಕ್ಷ ಎ.ಎನ್.ಧರಣೇಂದ್ರನ್ ತಿಳಿಸಿದರು.

**ನವೆಂಬರ್ ಕೊನೆ ಭಾನುವಾರ ಮಸ್ತಕಾಭಿಷೇಕ:** ಶಿವಮೊಗ್ಗ ಜಿಲ್ಲೆಯ ಹೊಂಬುಜ ಜೈನ ಮಠದ ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ ಸಾನ್ನಿಧ್ಯದಲ್ಲಿ, ಅನಂತ ಚತುರ್ದಶಿ ವ್ರತದ ಬಳಿಕ ಬಾಹುಬಲಿಗೆ ಮಸ್ತಕಾಭಿಷೇಕ ನಡೆಯುತ್ತಿತ್ತು. ನಿಗದಿತ ದಿನವಿರಲಿಲ್ಲ. ಸೆಪ್ಟೆಂಬರ್‌ನಿಂದ–ಡಿಸೆಂಬರ್ ಅವಧಿಯಲ್ಲಿ ಆಯಾ ಸಂದರ್ಭಕ್ಕೆ ತಕ್ಕಂತೆ ಮಸ್ತಕಾಭಿಷೇಕ ಮಹೋತ್ಸವ ಜರುಗುತ್ತಿತ್ತು.

ಪ್ರಸಕ್ತ ವರ್ಷ ಇದಕ್ಕೆ ತಿಲಾಂಜಲಿ ನೀಡಲಾಗಿದೆ. ದಿನವೊಂದನ್ನು ನಿಗದಿಪಡಿಸಲಾಗಿದೆ. ಸ್ವಾಮೀಜಿ ಸಲಹೆಯಂತೆ ಮಳೆಗಾಲ ಮುಗಿದ ಬಳಿಕ ನವೆಂಬರ್ ಕೊನೆಯ ಭಾನುವಾರ ಇನ್ಮುಂದೆ ಪ್ರತಿ ವರ್ಷವೂ ತಪ್ಪದೇ ಮಸ್ತಕಾಭಿಷೇಕ ನಡೆಯಲಿದೆ ಎಂದು ಗೊಮ್ಮಟಗಿರಿ ಕ್ಷೇತ್ರ ಸೇವಾ ಸಮಿತಿಯ ಅಧ್ಯಕ್ಷ ಡಾ.ಎಂ.ವಿ.ಶಾಂತಕುಮಾರ್ ಹೇಳಿದರು.

ಮಂಡ್ಯ ಜಿಲ್ಲೆಯ ಆರತಿಪುರ ಜೈನ ಮಠದ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮೀಜಿ ಇದೇ ಮೊದಲ ಬಾರಿಗೆ ಗೊಮ್ಮಟಗಿರಿಗೆ ಬರುತ್ತಿದ್ದು, ಪುರಪ್ರವೇಶ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

# ಮತ್ತೆ ಬಂದರು 'ಗಾಂಧಿ'

ಒಂದನೇ ಪುಟದಿಂದ

ಈ ಬಾರಿ ಡಿ.1ರಿಂದ ಮೂರು ತಿಂಗಳು ರಾಜ್ಯದ ವಿವಿಧೆಡೆ ನಾಟಕ ಪ್ರದರ್ಶನಕ್ಕೆ ಸಿದ್ಧತೆ ನಡೆಸಲಾಗಿದೆ. ಬೆಳಿಗ್ಗೆ 6ರಿಂದ ರಾತ್ರಿ 10ರ ವರೆಗೆ ತರಬೇತಿ ನೀಡಲಾಗುತ್ತದೆ. ಹೊರಾಂಗಣ ಹಾಗೂ ಒಳಾಂಗಣದಲ್ಲಿ ಪ್ರದರ್ಶನ ನೀಡಲು ಅನುಕೂಲವಾಗುವಂತೆ ಕಲಿಯುತ್ತಾರೆ' ಎಂದರು ಶಿಬಿರದ ನಿರ್ದೇಶಕ ಶ್ರೀಪಾದ ಭಟ್.

'ಬೆಳಿಗ್ಗೆಯಿಂದಲೇ ತಾಲೀಮಿಗೆ ಬರುತ್ತೇವೆ. ಕಳೆದ ವರ್ಷ ಇದೇ ನಾಟಕದ 350 ಪ್ರದರ್ಶನದಲ್ಲೂ ಅಭಿನಯಿಸಿದ್ದೇನೆ. ಕಲಿಯಲು ಕಷ್ಟವೇನೂ ಆಗುವುದಿಲ್ಲ. ಚಂದ್ರಮತಿ, ಕಸ್ತೂರ ಬಾ ಪಾತ್ರಗಳನ್ನು ಮಾಡಿದ್ದೇನೆ. ನಾಟಕದಲ್ಲಿ ಗಾಂಧಿಯ ಹಲವು ಪಾತ್ರಗಳು ಬರುತ್ತವೆ. ಅವುಗಳಲ್ಲಿ ಒಂದು ಪಾತ್ರ ನಿರ್ವಹಿಸುವೆ' ಎನ್ನುತ್ತಾರೆ ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ಅಕ್ಷತಾ.

ಕಲಾವಿದರಿಗೆ ಗಾಂಧಿ ತತ್ವ, ಸಿದ್ಧಾಂತಗಳು ಹಾಗೂ ಲೇಖನಗಳ ಬಗ್ಗೆ ತಿಳಿಸಲಾಗುತ್ತದೆ. ಅಲ್ಲದೇ, ಗುಂಪುಚರ್ಚೆಯನ್ನೂ ಮಾಡಲಾಗುತ್ತದೆ. ಒಟ್ಟು ಕಲಾವಿದರಲ್ಲಿ 16 ಯುವತಿಯರು ಇದ್ದಾರೆ. 14 ಕಲಾವಿದರ ಒಂದು ತಂಡ ರಚಿಸಲಾಗಿದೆ. ತಂಡಕ್ಕೆ ಒಬ್ಬರು ಸಂಯೋಜಕರು ಇರುತ್ತಾರೆ. ತರಬೇತಿ ಪಡೆದು ನಾಲ್ಕು ರಂಗಾಯಣಗಳ ವ್ಯಾಪ್ತಿಯಲ್ಲಿ ಪ್ರದರ್ಶನ ನೀಡಲಿದ್ದಾರೆ.

'ರಂಗಾಯಣದಲ್ಲಿ ಡಿಪ್ಲೊಮಾ ಕೋರ್ಸ್ ಮಾಡಿದ್ದೇನೆ. ನಾಟಕಕ್ಕೆ ಸಂಗೀತ ನಿರ್ವಹಣೆ ಮಾಡುತ್ತಿದ್ದೇನೆ, ಈ ಮೊದಲು 'ತಲೆದಂಡ', 'ಜೂಲಿಯಸ್ ಸೀಜರ್' ನಾಟಕಗಳಲ್ಲಿ ಅಭಿನಯಿಸಿದ ಅನುಭವ ಇದೆ' ಎಂದರು ಗುಂಡ್ಲುಪೇಟೆಯ ಮಂಜು.



ಅಕ್ಷತಾ



ಮಂಜು



ರಂಗಾಯಣದ ವನರಂಗದಲ್ಲಿ 'ಪಾಪು ಗಾಂಧಿ ಗಾಂಧಿ ಬಾಪು' ಆದ ನಾಟಕದ ಸಂಭಾಷಣೆ ಅಭ್ಯಾಸ ಮಾಡುತ್ತಿರುವ ಕಲಾವಿದರು



ವನರಂಗದಲ್ಲಿ ನಾಟಕದ ತಾಲೀಮಿನ ದೃಶ್ಯ

## ರೈಲುಗಳ ಮಾಹಿತಿ

*ಪ್ಯಾಸೆಂಜರ್, **ಎಕ್ಸ್‌ಪ್ರೆಸ್, ***ಸೂಪರ್ ಫಾಸ್ಟ್,****

ಭದ್ರತಾ ಸಹಾಯ ವಾಣಿ 182, ಸೇವಾ ಸಹಾಯವಾಣಿ 183, ವಿಚಾರಣೆ 139

| ಗಾಡಿ ಸಂಖ್ಯೆ | ಹೆಸರು | ಮೈಸೂರಿನಿಂದ | ಬೆಂಗಳೂರಿಗೆ | ಬೆಂಗಳೂರಿನಿಂದ | ಮೈಸೂರಿಗೆ |
|---|---|---|---|---|---|
| 22818/22817 | ಮೈಸೂರು–ಹೌರಾ***(ಸಾಪ್ತಾಹಿಕ) | ರಾತ್ರಿ12.30(ಸೋಮ) | ರಾತ್ರಿ 2.50 | ರಾತ್ರಿ 1 (ಭಾನು) | ರಾತ್ರಿ 3.45 |
| 12610/12609 | ಚೆನ್ನೈ ಎಕ್ಸ್‌ಪ್ರೆಸ್ | ಬೆಳಿಗ್ಗೆ 4.45 | ಬೆಳಿಗ್ಗೆ 7.45 | ರಾತ್ರಿ 8.10 | ರಾತ್ರಿ 11.30 |
| 16217/16218 | ಮೈಸೂರು–ಶಿರಡಿ**(ಸಾಪ್ತಾಹಿಕ) | ಬೆಳಿಗ್ಗೆ 5.30(ಸೋಮ) | ಬೆಳಿಗ್ಗೆ 8.27 | ರಾತ್ರಿ 3.30 | ಬೆಳಿಗ್ಗೆ 6 (ಗುರು) |
| 16518/16517 | ಕಣ್ಣೂರು ಎಕ್ಸ್‌ಪ್ರೆಸ್ | ಬೆಳಿಗ್ಗೆ 5.30 | ಬೆಳಿಗ್ಗೆ 8.20 | ರಾತ್ರಿ 8.30(ಸೋಮ, ಮಂ, ಭಾನು) | ರಾತ್ರಿ 11.05 |
| 66554/66553 | ಮೈಸೂರು–ಬೆಂಗಳೂರು* (ಮೆಮು) | ಬೆಳಿಗ್ಗೆ 6.10 | ಬೆಳಿಗ್ಗೆ 9:15 | ಸಂಜೆ 7.30 | ರಾತ್ರಿ 10.20 |
| 17326/17325 | ಮೈಸೂರು–ಹುಬ್ಬಳ್ಳಿ (ವಿಶ್ವಮಾನವ) | ಬೆಳಿಗ್ಗೆ 5.50 | ಬೆಳಿಗ್ಗೆ 8.55 | ಸಂಜೆ 5.45 | ರಾತ್ರಿ 8.40 |
| 16215/16216 | ಚಾಮುಂಡಿ ಎಕ್ಸ್‌ಪ್ರೆಸ್** | ಬೆಳಿಗ್ಗೆ 6.45 | ಬೆಳಿಗ್ಗೆ 9.30 | ಸಂಜೆ 6.15 | ರಾತ್ರಿ 9.05 |
| 12578/12577 | ಮೈಸೂರು–ಭಾಗಮತಿ*(ಸಾಪ್ತಾಹಿಕ) | ಬೆಳಿಗ್ಗೆ 7.20 (ಶನಿ) | ಬೆಳಿಗ್ಗೆ 9.55 | ರಾತ್ರಿ 8.55 (ಗುರು) | ರಾತ್ರಿ 11.30 |
| 16229/16230 | ಮೈಸೂರು–ವಾರಾಣಸಿ** | ಬೆಳಿಗ್ಗೆ 7.20 | ಬೆಳಿಗ್ಗೆ 9.55 | ನಸುಕು 12.15 (ಭಾನು,ಮಂಗಳ) | ನಸುಕು 2.55 |
| 16023/16024 | ಮಾಲ್ಗುಡಿ ಎಕ್ಸ್‌ಪ್ರೆಸ್ | ಬೆಳಿಗ್ಗೆ 8.25 | ಬೆಳಿಗ್ಗೆ 10.55 | ಮಧ್ಯಾಹ್ನ 1.30 | ಸಂಜೆ 4 |
| 56281/56282 | ಬೆಂಗಳೂರು– ಚಾಮರಾಜನಗರ * | ಬೆಳಿಗ್ಗೆ 9.05 | ಮಧ್ಯಾಹ್ನ 12.15 | ಮಧ್ಯಾಹ್ನ 3.30 | ಸಂಜೆ 6.40 |
| 12975/12976 | ಮೈಸೂರು–ಜೈಪುರ***(ಗುರು,ಶನಿ) | ಬೆಳಿಗ್ಗೆ 10.30 | ಮಧ್ಯಾಹ್ನ 12.55 | ಮಧ್ಯಾಹ್ನ 1 (ಬುಧ, ಶುಕ್ರ) | ಸಂಜೆ 3.45 |
| 12613/12614 | ಟಿಪ್ಪು ಎಕ್ಸ್‌ಪ್ರೆಸ್*** | ಬೆಳಿಗ್ಗೆ 11.30 | ಮಧ್ಯಾಹ್ನ 2.00 | ಮಧ್ಯಾಹ್ನ 3.15 | ಸಂಜೆ 5.45 |
| 17307/17308 | ಮೈಸೂರು–ಬಾಗಲಕೋಟೆ (ಬಸವ)** | ಮಧ್ಯಾಹ್ನ 1.30 | ಸಂಜೆ 4.30 | ಬೆಳಿಗ್ಗೆ 11.15 | ಮಧ್ಯಾಹ್ನ 1.50 |
| 12008/12007 | ಶತಾಬ್ಧಿ ಎಕ್ಸ್‌ಪ್ರೆಸ್*** (ಬುಧವಾರ ಹೊರತುಪಡಿಸಿ) | ಮಧ್ಯಾಹ್ನ 2.15 | ಸಂಜೆ 4.15 | ಬೆಳಿಗ್ಗೆ 11 | ಮಧ್ಯಾಹ್ನ 1 |
| 16557/16558 | ರಾಜ್ಯರಾಣಿ ಎಕ್ಸ್‌ಪ್ರೆಸ್ | ಮಧ್ಯಾಹ್ನ 2.30 | ಸಂಜೆ 5.10 | ಬೆಳಿಗ್ಗೆ 10.30 | ಮಧ್ಯಾಹ್ನ 1.30 |
| 16315/16316 | ಕೊಚ್ಚುವೇಲಿ ಎಕ್ಸ್‌ಪ್ರೆಸ್ | ಮಧ್ಯಾಹ್ನ 12.50 | ಸಂಜೆ 4.35 | ಬೆಳಿಗ್ಗೆ 8.25 | ಬೆಳಿಗ್ಗೆ 11.20 |
| 12786/12785 | ಕಾಚಿಗುಡ ಮೈಸೂರು ಎಕ್ಸ್‌ಪ್ರೆಸ್ | ಮಧ್ಯಾಹ್ನ 2.45 | ಸಂಜೆ 5.40 | ಬೆಳಿಗ್ಗೆ 6.45 | ಬೆಳಿಗ್ಗೆ 9.45 |
| 66552/66551 | ಮೈಸೂರು–ಬೆಂಗಳೂರು (ಮೆಮು) | ಮಧ್ಯಾಹ್ನ 1.45 | ಸಂಜೆ 5 | ಬೆಳಿಗ್ಗೆ 9.20 | ಮಧ್ಯಾಹ್ನ 12.45 |
| 16232/16231 | ಮೈಸೂರು–ಮೈಲಾಡುತುರೈ** | ಸಂಜೆ 4.15 | ಸಂಜೆ 6.45 | ಬೆಳಿಗ್ಗೆ 5.50 | ಬೆಳಿಗ್ಗೆ 8.30 |
| 16535/16536 | ಮೈ –ಸೊಲ್ಲಾಪುರ(ಗೋಲ್‌ಗುಂಬಜ್) | ಮಧ್ಯಾಹ್ನ 3.30 | ಸಂಜೆ 6.50 | ಬೆಳಿಗ್ಗೆ 8.05 | ಬೆಳಿಗ್ಗೆ 11 |
| 16219/16220 | ಚಾಮರಾಜನಗರ–ತಿರುಪತಿ* | ಸಂಜೆ 5 | ರಾತ್ರಿ 8.15 | ಬೆಳಿಗ್ಗೆ 7.30 | ಬೆಳಿಗ್ಗೆ 10.40 |
| 16236/16235 | ಮೈಸೂರು–ಟುಟಿಕೋರಿನ್** | ಸಂಜೆ 6.05 | ರಾತ್ರಿ 9.05 | ಬೆಳಿಗ್ಗೆ 7 | ಬೆಳಿಗ್ಗೆ 9.55 |
| 16210/16209 | ಮೈಸೂರು- ಅಜ್ಮೀರ್ ** | ಸಂಜೆ 6.30 (ಮಂಗಳ, ಗುರು) | ರಾತ್ರಿ 9.30 | ರಾತ್ರಿ 3.30 (ಶುಕ್ರ, ಭಾನು) | ಬೆಳಿಗ್ಗೆ 6 |
| 16592/16591 | ಮೈಸೂರು–ಹುಬ್ಬಳ್ಳಿ (ಹಂಪಿ)** | ಸಂಜೆ 7.00 | ರಾತ್ರಿ 9.55 | ಬೆಳಿಗ್ಗೆ 6.20 | ಬೆಳಿಗ್ಗೆ 9.10 |
| 56234/56233 | ಮೈಸೂರು–ಬೆಂಗಳೂರು*(ಸಾಪ್ತಾಹಿಕ) | ಸಂಜೆ 7.10 | ರಾತ್ರಿ 10.25 | ಬೆಳಿಗ್ಗೆ 5 | ಬೆಳಿಗ್ಗೆ 8.00 |
| 22681/22682 | ಮೈಸೂರು–ಚೆನ್ನೈ*** | ರಾತ್ರಿ 8.10 (ಬುಧ) | ರಾತ್ರಿ 10.45 | ಬೆಳಿಗ್ಗೆ 5.25 (ಶುಕ್ರ) | ಬೆಳಿಗ್ಗೆ 8.00 |
| 16022/16021 | ಮೈಸೂರು–ಚೆನ್ನೈ (ಕಾವೇರಿ)** | ರಾತ್ರಿ 8.30 | ರಾತ್ರಿ 11.25 | ಬೆಳಿಗ್ಗೆ 3.50 | ಬೆಳಿಗ್ಗೆ 6.40 |
| 56263/56264 | ಮೈಸೂರು–ಬೆಂಗಳೂರು* | ರಾತ್ರಿ 11.55 | ಬೆಳಿಗ್ಗೆ 4:15 | ರಾತ್ರಿ 11.55 | ನಸುಕಿನ 4 |
| 06576/06575 | ಮೆಮು | ರಾತ್ರಿ 8.30 | ರಾತ್ರಿ 11.20 | ಸಂಜೆ 5.20 | ರಾತ್ರಿ 8.20 |

## ಮೈಸೂರು–ಅರಸೀಕೆರೆ ರೈಲುಗಾಡಿಗಳ ವೇಳಾಪಟ್ಟಿ

| ಗಾಡಿ ಸಂಖ್ಯೆ | ಹೆಸರು | ಮೈಸೂರಿನಿಂದ | ಅರಸೀಕೆರೆಗೆ | ಅರಸೀಕೆರೆಯಿಂದ | ಮೈಸೂರಿಗೆ |
|---|---|---|---|---|---|
| 16206/16205 | ಮೈಸೂರು–ತಾಳಗುಪ್ಪಾ** | ಬೆಳಿಗ್ಗೆ 6.00 | ಬೆಳಿಗ್ಗೆ 8.48 | ಸಂಜೆ 6.50 | ರಾತ್ರಿ 10.15 |
| 11036/11035 | ಮೈಸೂರು–ದಾದರ್ (ಶರಾವತಿ)** | ಬೆಳಿಗ್ಗೆ 6.15 (ಭಾನು) | ಬೆಳಿಗ್ಗೆ.9.10 | ಸಂಜೆ 6.05 (ಶುಕ್ರ) | ರಾತ್ರಿ 9.40 |
| 17326/17325 | ಮೈಸೂರು– ಹುಬ್ಬಳ್ಳಿ (ಬೆಂಗಳೂರು ಮಾರ್ಗ) | ಬೆಳಿಗ್ಗೆ 6.10 | ಮಧ್ಯಾಹ್ನ 12.20 | ಮಧ್ಯಾಹ್ನ 1.15 | ರಾತ್ರಿ 8.40 |
| 56266/56265 | ಮೈಸೂರು–ಅರಸೀಕೆರೆ* | ಬೆಳಿಗ್ಗೆ 6.30 | ಬೆಳಿಗ್ಗೆ 10.40 | ಸಂಜೆ 5.30 | ರಾತ್ರಿ 9.25 |
| 16229/16230 | ಮೈಸೂರು–ಬಿಎಸ್‌ಬಿ | ಬೆಳಿಗ್ಗೆ 7.20 (ಮಂಗಳ/ಗುರು) | ಮಧ್ಯಾಹ್ನ 1.10 | ರಾತ್ರಿ 8.50 (ಸೋಮ/ಶನಿ) | ರಾತ್ರಿ 2.50 |
| 56270/56269 | ಮೈಸೂರು–ಶಿವಮೊಗ್ಗ* | ಬೆಳಿಗ್ಗೆ 10.20 | ಮಧ್ಯಾಹ್ನ 1.45 | ಮಧ್ಯಾಹ್ನ 12.30 | ಸಂಜೆ 4.30 |
| 56276/56275 | ಮೈಸೂರು–ತಾಳಗುಪ್ಪ* | ಮಧ್ಯಾಹ್ನ 2.00 | ಸಂಜೆ 6.00 | ಬೆಳಿಗ್ಗೆ 10.25 | ಮಧ್ಯಾಹ್ನ2.50 |
| 16535/16536 | ಮೈಸೂರು–ಗೋಲಗುಂಬಜ್ (ಬೆಂಗಳೂರು ಮಾರ್ಗ) | ಮಧ್ಯಾಹ್ನ 3.30 | ರಾತ್ರಿ 9.45 | ಬೆಳಿಗ್ಗೆ 4.13 | ಬೆಳಿಗ್ಗೆ 11.00 |
| 56268/56267 | ಮೈಸೂರು–ಅರಸೀಕರೆ* | ಸಂಜೆ 6.20 | ರಾತ್ರಿ 10.40 | ಬೆಳಿಗ್ಗೆ 5 | ಬೆಳಿಗ್ಗೆ 9.30 |
| 16210/16209 | ಮೈಸೂರು–ಅಜ್ಮೀರ್ ಎಕ್ಸ್‌ಪ್ರೆಸ್ | ಸಂಜೆ 6.30 (ಮಂಗಳ/ಗುರು) | ರಾತ್ರಿ 12.45 | ರಾತ್ರಿ 10.55 (ಸೋಮ/ಶನಿ) | ಬೆಳಿಗ್ಗೆ 6.00 |
| 12781/12782 | ಸ್ವರ್ಣಜಯಂತಿ** | ರಾತ್ರಿ 8.10 (ಶುಕ್ರ) | ರಾತ್ರಿ 11.05 | ರಾತ್ರಿ 1.40 (ಬುಧ) | ನಸುಕಿನ 4.55 |
| 17301/17302 | ಮೈಸೂರು–ಶಿವಮೊಗ್ಗ (ಧಾರವಾಡ) | ರಾತ್ರಿ 10.30 | ರಾತ್ರಿ 1.35 | ರಾತ್ರಿ 3.05 | ಬೆಳಿಗ್ಗೆ 7 |
| 56216/56215 | ಮೈಸೂರು–ಶ್ರವಣಬೆಳಗೊಳ* | ಬೆಳಿಗ್ಗೆ 7.45 | ಬೆಳಿಗ್ಗೆ 11.43 (ಶ್ರ.ಗೊಳ) | ಮಧ್ಯಾಹ್ನ 2.20 (ಶ್ರ.ಗೊಳ) | ರಾತ್ರಿ 8.05 |

## ಮೈಸೂರು–ಚಾಮರಾಜನಗರ ಮಾರ್ಗ

| ಗಾಡಿ ಸಂಖ್ಯೆ | ಮೈಸೂರಿನಿಂದ | ನಂಜನಗೂಡಿಗೆ | ಚಾ.ರಾಜನಗರಕ್ಕೆ | ಚಾ.ರಾಜನಗರದಿಂದ | ನಂಜನಗೂಡಿಗೆ | ಮೈಸೂರಿಗೆ |
|---|---|---|---|---|---|---|
| 56202/56281 | ಬೆಳಿಗ್ಗೆ 5 | ಬೆಳಿಗ್ಗೆ 5.39 | ಬೆಳಿಗ್ಗೆ 6.40 | ಬೆಳಿಗ್ಗೆ 7.00 | ಬೆಳಿಗ್ಗೆ 7.55 | ಬೆಳಿಗ್ಗೆ 9.00 |
| 56204/56203 | ಬೆಳಿಗ್ಗೆ 7.20 | ಬೆಳಿಗ್ಗೆ 8 | ಬೆಳಿಗ್ಗೆ 9.10 | ಬೆಳಿಗ್ಗೆ 10.40 | ಬೆಳಿಗ್ಗೆ 11.30 | ಮಧ್ಯಾಹ್ನ 12.25 |
| 56206/56205 | ಬೆಳಿಗ್ಗೆ 9.10 | ಬೆಳಿಗ್ಗೆ 9.45 ನಂಜನಗೂಡು ಮಾತ್ರ | ಬೆಳಿಗ್ಗೆ 10 | ಬೆಳಿಗ್ಗೆ 11.00 | | |
| 56220/16219 | ಬೆಳಿಗ್ಗೆ 10.30 | ಬೆಳಿಗ್ಗೆ 11.13 | ಮಧ್ಯಾಹ್ನ 12.30 | ಮಧ್ಯಾಹ್ನ 3:10 | ಮಧ್ಯಾಹ್ನ 3.40 | ಸಂಜೆ 4.55 |
| 56210/56209 | ಮಧ್ಯಾಹ್ನ 12.30 | ಮಧ್ಯಾಹ್ನ 1.10 | ಮಧ್ಯಾಹ್ನ 2.15 | ಸಂಜೆ 6 | ಸಂಜೆ 6.43 | ಸಂಜೆ 7.50 |
| 56208/56207 | ಮಧ್ಯಾಹ್ನ 2.50 | ಮಧ್ಯಾಹ್ನ 3.35 | ಸಂಜೆ 4.40 | ಸಂಜೆ 5 | ಸಂಜೆ 5.40 | ಸಂಜೆ 6.35 |
| 56282/56201 | ಸಂಜೆ 6.45 | ಸಂಜೆ 7.29 | ರಾತ್ರಿ 8.35 | ರಾತ್ರಿ 8.50 | ರಾತ್ರಿ 9.35 | ರಾತ್ರಿ 10.30 |

# ಭಾರತೀಯರ ಆಹಾರ ವ್ಯವಸ್ಥೆಯಲ್ಲಿ ಷಡ್ರಸಗಳು

ತಾರೋಡಿ ಸುರೇಶ

ರಸವನ್ನು ರುಚಿ ಎಂದೂ ಹೇಳುತ್ತಾರೆ. ಸಾಹಿತ್ಯದಲ್ಲಿ ನವರಸಗಳ ಆಸ್ವಾದನೆ ಇದ್ದರೆ ಸೌಹಿತ್ಯವು (ಅಡುಗೆಯು) ಷಡ್ರಸಗಳಿಗೆ ವಿಷಯ.

ಶ್ರೀರಂಗಮಹಾಗುರುಗಳು 'ರಸಭರಿತವಾದ ಕಾವ್ಯ ಓದಿ ರಸಭರಿತವಾಗಿ ಊಟಮಾಡಿ ಜೀವನಕ್ಕೆ ಒಳ್ಳೆಯ ಟೆಕ್ಸ್ಟ್-ಸಾಹಿತ್ಯಕ್ಕೆ ಇರಲಿ, ಹಾಗೆಯೇ ಒಳ್ಳೆಯ ಟೇಸ್ಟ್- ಸೌಹಿತ್ಯ ಇರಲಿ' ಎನ್ನುತಿದ್ದರು.

ಆಧುನಿಕ ವೈದ್ಯಶಾಸ್ತ್ರವು ಟೇಸ್ಟ್ ಬಡ್ಸ್ ಎಂಬುದಾಗಿ ನಾಲ್ಕು ರುಚಿಕೇಂದ್ರಗಳನ್ನು ಗಮನಿಸಿದೆ. ಭಾರತೀಯರು ಮಧುರ (ಸಿಹಿ), ಆಮ್ಲ (ಹುಳಿ), ಕಟು (ಕಾರ), ಲವಣ (ಉಪ್ಪು), ಕಷಾಯ (ಒಗರು), ತಿಕ್ತ (ಕಹಿ) ಎಂಬ ಆರು ರಸಗಳನ್ನು ಗುರುತಿಸಿ, ತಮ್ಮ ಆಹಾರ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಿದ್ದಾರೆ. ರಸಗಳ ಬಗ್ಗೆ ರುಚಿ ಎಂಬಷ್ಟೇ ಪರಿಚಯವನ್ನು ನಾವು ಇಂದಿನ ಆಹಾರ ತಜ್ಞರಲ್ಲಿ ಕಾಣುತ್ತೇವೆ. ಆದರೆ ಮಹರ್ಷಿಗಳಲ್ಲಿ ರಸದ ಚಿಂತನೆಯು ಭೂ-ಸಗ್ಗಗಳನ್ನು ವ್ಯಾಪಿಸಿದೆ.

ರಸವು ದ್ರವ್ಯಗಳಲ್ಲಿ ಸಂಗ್ರಹಿತವಾಗಿರುವುದು. ಈ ದ್ರವ್ಯಕ್ಕೆ ರಸಗಳು ಬಂದದ್ದಾದರೂ ಹೇಗೆ? ಹೀಗೆ ರಸದ ಮೂಲವನ್ನು ಅರಸುತ್ತಾ ಜ್ಞಾನಿಗಳ ಅನ್ವೇಷಣೆ ಆಹಾರದ ಪರರೂಪವಾದ ಪರಬ್ರಹ್ಮ ವಸ್ತುವಿನವರೆಗೂ ಸಾಗಿತು. ಅಲ್ಲಿ ಪರಬ್ರಹ್ಮನನ್ನೂ ಅವರು ಮೊಟ್ಟಮೊದಲನೆಯ ಮತ್ತು ಜೀವನದಲ್ಲಿ ಇನ್ನೆಲ್ಲೂ ಕಾಣಸಿಗದ ಆಸ್ವಾದನೆಯ ರಸರೂಪಿಯನ್ನಾಗಿ ಅರ್ಥಮಾಡಿಕೊಂಡರು. ಭಗವಂತನೇ ರಸರೂಪಿಯು. ಎಲ್ಲ ರಸಗಳಿಗೂ ಬೀಜಭೂತನಾದವನು ಎಂದು ಅರಿತು 'ರಸೋ ವೈ ಸಃ' ಎಂಬುದಾಗಿ ಅವನನ್ನು ಕರೆದು ನಮಿಸಿದರು.

ಅವನತನ ಇದ್ದರೆ ಮಾತ್ರ ಆನಂದವನ್ನು ಜೀವಿಯು ಅನುಭವಿಸಬಲ್ಲುದು ಎಂಬುದನ್ನು ಸಂದೇಹಕ್ಕೆಡೆಯಿಲ್ಲದೆ ಅರಿತರು. 'ಪರಮಾತ್ಮನೇ ಸರ್ವ ರಸಾಶ್ರಯನು, ಎಲ್ಲ ರಸಗಳ ತವರುಮನೆ, ಅವನೇ ರಸ' ಎಂದು ಸಾರಿದರು. ಮುಂದೆ ಪರಮಾತ್ಮನೇ ತನ್ನನ್ನು ಪುರುಷಪ್ರಕೃತಿ ರೂಪಗಳಾಗಿಯೂ, ಅನ್ಯಾನ್ಯ ದೇವತಾಶಕ್ತಿಗಳಾಗಿಯೂ ಬೆಳೆಸಿಕೊಂಡನು. ಅದರಲ್ಲಿ ಅಗ್ನಿದೇವತೆಯಿಂದ ಮೂರು ಅಗ್ನಿಪ್ರಧಾನ ರಸಗಳಾದ ಕಟು, ಹುಳಿ ಮತ್ತು ಲವಣರಸಗಳೂ ಸೋಮದೇವತೆಯಿಂದ ಮಧುರ-ತಿಕ್ತ-ಕಷಾಯಗಳೆಂಬ ಸೌಮ್ಯರಸಗಳೂ ಹುಟ್ಟಿಕೊಂಡವು. ಸ್ಥೂಲವಿಶ್ವದಲ್ಲಿ ಇವು ದ್ರವ್ಯಗಳಲ್ಲಿ ಆಶ್ರಯ ಪಡೆಯುವ ಪ್ರಕ್ರಿಯೆಗಳ ವಿವರಗಳೂ ಆರ್ಷಸಾಹಿತ್ಯಗಳಲ್ಲಿ ಲಭ್ಯವಿದೆ.

ಆದ್ದರಿಂದ ನಮ್ಮ ಜೀವನದ ಪ್ರತಿ ಹೆಜ್ಜೆಯಲ್ಲಿಯೂ ದ್ರವ್ಯಗಳನ್ನಾಶ್ರಯಿಸಿ ಬಾಳುವಾಗ ಷಡ್ರಸಗಳ ಪಾತ್ರವಿದೆ. ಉದಾಹರಣೆಗೆ ಒಂದು ಮಿಡಿಮಾವಿನಿಂದ ಹಿಡಿಗಾತ್ರದ ಹಣ್ಣಾಗುವವರೆಗೆ, ಮಿಡಿಯಲ್ಲಿ ಕೊಂಚ ಕಹಿ, ನಂತರ ಸ್ವಲ್ಪ ಒಗಚು, ಹುಳಿ, ಅತ್ಯಲ್ಪಪ್ರಮಾಣದ ಲವಣ ಕಟುಗಳು ಹೀಗೆ ಷಡ್ರಸಗಳ ಪಾತ್ರಗಳನ್ನು ಕಾಣುತ್ತೇವೆ. ಆದರೆ ಕಟ್ಟಕಡೆಯಲ್ಲಿ ಮಧುರರಸ. ಇಂತಹ ಅನೇಕ ಉದಾಹರಣೆಗಳನ್ನು ಪ್ರತ್ಯಕ್ಷ ತೋರಿಸಿ ವಿಷಯಗಳನ್ನು ಶ್ರೀರಂಗ ಮಹಾಗುರುಗಳು ಮನಗಾಣಿಸುತ್ತಿದ್ದರು.

ಹಾಗೆಯೇ ಬುದ್ಧಿಜೀವಿಯಾದ ಮಾನವನು ಅರಿತು ರಸಗಳನ್ನು ತನ್ನ ಜೀವನದಲ್ಲಿ ಯೋಜಿಸಿಕೊಳ್ಳಬೇಕಾಗುತ್ತದೆ. ಪ್ರಕೃತಿ-ಕಾಲ-ದೇಶ-ವಯಸ್ಸು ಇವುಗಳೆಲ್ಲವನ್ನೂ ಗಮನಿಸಿ ಸೂಕ್ತ ರಸಗಳನ್ನು ಕೊಡಬೇಕಾಗುತ್ತದೆ. ಹೀಗೆ ಪರಬ್ರಹ್ಮಮೂಲದಿಂದ ವಿಕಾಸಗೊಂಡ ಜೀವವು, ಆ ಮೂಲದಿಂದಲೇ ವಿಸ್ತಾರಗೊಂಡ ರಸಗಳನ್ನು ವೈಜ್ಞಾನಿಕವಾಗಿ ಅಳವಡಿಸಿಕೊಂಡಾಗ ಪುನಃ ರಸರೂಪಿಯಾದ ತನ್ನ ನೆಲೆಯನ್ನು ಸೇರಬಹುದು ಎಂಬ ವಿಜ್ಞಾನವನ್ನು ಮಹರ್ಷಿಗಳ ರಸಮೀಮಾಂಸೆಯಲ್ಲಿ ಗಮನಿಸಬಹುದು.

## ಮುನ್ನೋಟ

### ಶನಿವಾರ, ನ.23

**'ಅಧ್ಯಾತ್ಮ' ಚಿತ್ರಕಲಾ ಪ್ರದರ್ಶನ**

ಆರ್ಟ್ಸ್ ಗ್ಯಾಲರಿಯಲ್ಲಿ ನ.23ರಿಂದ 30ರವರೆಗೆ ಕಲಾವಿದ ಜಯದೇವ ಅವರ ಅಧ್ಯಾತ್ಮ ಕುರಿತು ರಚಿಸಿರುವ ಚಿತ್ರಕಲಾಕೃತಿಗಳ ಪ್ರದರ್ಶನ ಆಯೋಜಿಸಲಾಗಿದೆ.

ಶನಿವಾರ (ನ.23) ಬೆಳಿಗ್ಗೆ 11.30ಕ್ಕೆ ವಿದ್ವಾಂಸ ಪ್ರೊ.ಎಚ್.ವಿ.ನಾಗರಾಜರಾವ್ ಉದ್ಘಾಟನೆ ಮಾಡಲಿದ್ದಾರೆ. ಇತಿಹಾಸತಜ್ಞ ಪ್ರೊ.ವಿಜಯರಾವ್ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸಹಕಾರಿ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಎಚ್.ವಿ.ರಾಜೀವ್ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಸ್ಥಳ: ಆರ್ಟ್ಸ್ ಗ್ಯಾಲರಿ, ಗೋಕುಲಂ 3ನೇ ಹಂತ, ಗಣಪತಿ ದೇವಾಲಯದ ಹತ್ತಿರ. ಬೆಳಿಗ್ಗೆ 11ರಿಂದ ಸಂಜೆ 7ರವರೆಗೆ ಪ್ರದರರ್ಶನವಿರುತ್ತದೆ. ಮಾಹಿತಿಗೆ: 94487 97570

**ರಾಗಾರೋಗ್ಯ**



ಶ್ರೀಹರ್ಷ

ಉನ್ನತಿ ಸಂಸ್ಥೆಯು ರಾಗಾರೋಗ್ಯ–2 ಎಂಬ ವಿನೂತನ ಸಂಗೀತ ಕಾರ್ಯಕ್ರಮವನ್ನು ನ.23ರಂದು ಸಂಜೆ 6 ಗಂಟೆಗೆ ಕಲಾಮಂದಿರದಲ್ಲಿ ಆಯೋಜಿಸಿದೆ.

ನಮ್ಮ ಆರೋಗ್ಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಶಾಸ್ತ್ರೀಯ ಸಂಗೀತ ಹಾಗೂ ಅದರ ರಾಗಗಳು ಹೇಗೆ ಪರಿಣಾಮಕಾರಿ ಆಗುತ್ತವೆ ಎಂಬುದನ್ನು ಪ್ರಸ್ತುತಪಡಿಸುವ ಹೊಸ ಪ್ರಯತ್ನ ರಾಗಾರೋಗ್ಯ ಕಾರ್ಯಕ್ರಮ.

ಈ ಕಾರ್ಯಕ್ರಮದಲ್ಲಿ ಗಾಯಕ ಶ್ರೀಹರ್ಷ ಅವರು ಹೃದ್ರೋಗಕ್ಕೆ ಸಂಬಂಧಪಟ್ಟ ಕಾಯಿಲೆಗಳಿಗೆ ಯಾವ ರಾಗ ಪರಿಣಾಮಕಾರಿ ಎಂಬುದನ್ನು ತಿಳಿಸಿ, ಆ ರಾಗವನ್ನು ಪ್ರಸ್ತುತಪಡಿಸುವುದರ ಜೊತೆಗೆ ಆ ರಾಗದಲ್ಲಿ ಸಂಯೋಜನೆಯಾಗಿರುವ ಸಂಗೀತದ ಹಲವು ಪ್ರಕಾರಗಳನ್ನು ಅಂದರೆ ವಚನ, ಭಾವಗೀತೆ, ದೇವರನಾಮ, ಜಾನಪದಗೀತೆ, ಚಿತ್ರಗೀತೆಗಳನ್ನು ಹಾಡಿ ರಂಜಿಸಲಿದ್ದಾರೆ.

## ವೀಣೆ ಶೇಷಣ್ಣ ಜಯಂತಿ ಇಂದಿನಿಂದ



ವೀಣೆ ಶೇಷಣ್ಣ

ಕುವೆಂಪುನಗರದ ಗಾನಭಾರತೀ ಸಂಸ್ಥೆಯಲ್ಲಿ ವೀಣೆ ಶೇಷಣ್ಣ ಜಯಂತಿಯನ್ನು ನ.23 ಹಾಗೂ 24ರಂದು ಆಯೋಜಿಸಲಾಗಿದೆ.

ಶನಿವಾರ (ನ.23) ಸಂಜೆ 6 ಗಂಟೆಗೆ ಪ್ರೊ. ಮೈಸೂರು ವಿ.ಸುಬ್ರಹ್ಮಣ್ಯ ಅವರು ವೀಣೆ ಶೇಷಣ್ಣ ಅವರ ಜೀವನ ಹಾಗೂ ಸಾಧನೆಯನ್ನು ಪರಿಚಯಿಸುವರು. ನಂತರ ವಿದ್ವಾನ್ ಎಸ್.ಶಂಕರ್ ಅವರಿಂದ ಗಾಯನ ಇರಲಿದೆ. ವಿದ್ವಾನ್ ಮೈಸೂರು ಎನ್.ಕಾರ್ತಿಕ್ ಅವರು ವಯೊಲಿನ್, ವಿದ್ವಾನ್ ಅನಿರುದ್ಧ ಭಟ್ ಅವರು ಮೃದಂಗ ಹಾಗೂ ವಿದ್ವಾನ್ ಆರ್.ಕಾರ್ತಿಕ್ ಅವರು ಖಂಜಿರದಲ್ಲಿ ಸಹಕರಿಸುವರು.

ಭಾನುವಾರ (ನ.24) ಸಂಜೆ 6 ಗಂಟೆಗೆ ವಿದುಷಿ ಡಾ.ಎನ್.ಆರ್.ಶ್ರೀಲತಾ ಅವರು 'ವೀಣೆ ಶೇಷಣ್ಣ ಅವರ ಸಂಗೀತದ ಮೇಲೆ ಹಿಂದೂಸ್ತಾನಿ ಸಂಗೀತದ ಪ್ರಭಾವ' ಕುರಿತು ಪ್ರಾತ್ಯಕ್ಷಿಕೆ ನೀಡುವರು. ನಂತರ ವಿದ್ವಾನ್ ಅನಂತ ಪದ್ಮನಾಭನ್ ಅವರಿಂದ ವೀಣಾ ವಾದನ ಕಛೇರಿ ನಡೆಯಲಿದೆ. ವಿದ್ವಾನ್ ತುಮಕೂರು ಬಿ.ರವಿಶಂಕರ್ ಅವರು ಮೃದಂಗದಲ್ಲಿ ಹಾಗೂ ವಿದ್ವಾನ್ ಶರತ್ ಕೌಶಿಕ್ ಅವರು ಘಟಂನಲ್ಲಿ ಸಾಥ್ ನೀಡುವರು.

### ಭಾನುವಾರ ನ.24

**ಪ್ರಶಸ್ತಿ ಪ್ರದಾನ**

ಎನ್.ವಿ.ಎಸ್. ಕ್ರಿಯೇಷನ್ಸ್ ವತಿಯಿಂದ 4ನೇ ವಾರ್ಷಿಕೋತ್ಸವದ ಅಂಗವಾಗಿ ಭಾನುವಾರ (ನ.24) ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ.

ಬಾಲರತ್ನ ಪ್ರಶಸ್ತಿ: ಅಪೇಕ್ಷಾ, ಜೆ.ಖುಷಿ, ಮಹೇಶ್ವರಿದಾಸ್ ಹಾಗೂ ಮೋಹನ್, ಸಮಾಜ ಸೇವಕಿ ಪುರಸ್ಕೃತರು: ಜಿ.ಗಾಯತ್ರಿ.

ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ. ಮಧ್ಯಾಹ್ನ 12.30.

**ನಟನದಲ್ಲಿ 'ಸಾಯೋ ಆಟ' ನಾಟಕ**

ಮಂಡ್ಯ ರಮೇಶ್ ನೇತೃತ್ವದ ರಾಮಕೃಷ್ಣನಗರದ ನಟನ ರಂಗಶಾಲೆಯಲ್ಲಿ ದ.ರಾ.ಬೇಂದ್ರೆ ರಚನೆಯ 'ಸಾಯೋ ಆಟ' ನಾಟಕ ನ.24ರಂದು ಸಂಜೆ 6.30ಕ್ಕೆ ಪ್ರದರ್ಶನಗೊಳ್ಳಲಿದೆ.

ಈ ನಾಟಕವನ್ನು ಮಂಡ್ಯ ರಮೇಶ್ ನಿರ್ದೇಶಿಸಿದ್ದಾರೆ. 'ನಗಲು ಕಲಿಯುವುದರಲ್ಲಿ ಸಾಮಾಜಿಕ ಹಿತವಿದೆ, ತಿಳಿವಳಿಕೆಗೆ ಹಾದಿ ಇದೆ. ಸಾಯೋ ಆಟ ನಿಲ್ಲಬೇಕು, ಬದುಕೋ ಆಟ ನಡೆಯಬೇಕು. ಸಾಯೋ ಆಟ ಸುಳ್ಳಾದ ದಿವಸ ನವಯುಗದ ಪ್ರಾರಂಭ' ಎಂದು ಸಂದೇಶ ಸಾರುವ ಈ ನಾಟಕ ಶುದ್ಧ ಹಾಸ್ಯದ ಮೂಲಕ ಪ್ರೇಕ್ಷಕರನ್ನು ಮನರಂಜಿಸಲಿದೆ.

**ಭಾವಸಂಗಮ**



ಅಮ್ಮ ರಾಮಚಂದ್ರ

ತರಳಬಾಳು ಸಮಾಗಮವು ರಾಜ್ಯೋತ್ಸವ ಪ್ರಯುಕ್ತ ಭಾವಸಂಗಮ ಹಾಗೂ ದತ್ತಿ ಕಾರ್ಯಕ್ರಮವನ್ನು ಭಾನುವಾರ (ನ.24) ಸಂಜೆ 6.30 ಗಂಟೆಗೆ ಬನ್ನಿಮಂಟಪ ರಸ್ತೆಯ ತಿಲಕ್‌ನಗರದ ತರಳಬಾಳು ವಿದ್ಯಾರ್ಥಿನಿಲಯದಲ್ಲಿ ಏರ್ಪಡಿಸಿದೆ.

ಪ್ರೊ.ಮೊರಬದ ಮಲ್ಲಿಕಾರ್ಜುನ ದತ್ತಿ ಉಪನ್ಯಾಸ ನೀಡುವರು. ನಂತರ ಗಾಯಕ ಅಮ್ಮ ರಾಮಚಂದ್ರ ಕನ್ನಡ ಗೀತೆಗಳನ್ನು ಹಾಡುವರು.

**ಸಾಹಿತ್ಯೋತ್ಸವ**

ಗ್ರಾಮಾಂತರ ಬುದ್ಧಿಜೀವಿಗಳ ಬಳಗ ಹಾಗೂ ಅಖಿಲ ಭಾರತೀಯ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಿಷತ್ ಆಶ್ರಯದಲ್ಲಿ ರಾಜ್ಯೋತ್ಸವ ಹಾಗೂ ರಾಜ್ಯಮಟ್ಟದ ಸಾಹಿತ್ಯೋತ್ಸವ ಕಾರ್ಯಕ್ರಮವನ್ನು ನ.24ರಂದು ಬೆಳಿಗ್ಗೆ 10.30 ಗಂಟೆಗೆ ಜೆಎಲ್‌ಬಿ ರಸ್ತೆಯ ಎಂಜಿನಿಯರುಗಳ ಸಂಸ್ಥೆಯಲ್ಲಿ ಆಯೋಜಿಸಲಾಗಿದೆ.

ಸಾಹಿತ್ಯೋತ್ಸವವನ್ನು ಲೇಖಕಿ ಡಾ.ಲತಾ ರಾಜಶೇಖರ್ ಉದ್ಘಾಟಿಸುವರು. ನಂತರ ಭೇರ್ಯ ರಾಮಕುಮಾರ್ ಸಂಪಾದನೆಯ 'ಕಾವ್ಯ ದಸರಾ', ಜೆ.ಲೋಹಿತ್ ಅವರ 'ವ್ಯಕ್ತಿತ್ವ ವಿಕಾಸ ದರ್ಶನ', ಬಿ.ಬಿ.ಲಕ್ಷ್ಮೇಗೌಡ ಅವರ 'ಸುತ್ತಮುತ್ತ-2' ಕೃತಿಗಳು ಬಿಡುಗಡೆಗೊಳ್ಳಲಿವೆ.

**ಇಂದು, ನಾಳೆ 'ಬೆಟ್ಟದ ಜೀವ' ನಾಟಕ ಪ್ರದರ್ಶನ**



ಶಿವರಾಮ ಕಾರಂತ ಅವರ 'ಬೆಟ್ಟದ ಜೀವ' ಕಾದಂಬರಿಯನ್ನು ಪ್ರೊ.ಎಸ್.ಆರ್.ರಮೇಶ್ ಅವರು ರಂಗರೂಪಕ್ಕಿಳಿಸಿ, ರಚಿಸಿ, ನಿರ್ದೇಶಿಸಿದ ನಾಟಕ ನ.23 ಹಾಗೂ 24ರಂದು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಮಧ್ಯಾಹ್ನ 3.30 ಹಾಗೂ ರಾತ್ರಿ 7 ಗಂಟೆಗೆ ಪ್ರದರ್ಶನಗೊಳ್ಳಲಿದೆ. ಪರಿವರ್ತನ ರಂಗ ಸಮಾಜ ತಂಡ ಪ್ರಸ್ತುತಪಡಿಸುವ ಈ ನಾಟಕದ ಅವಧಿ 2 ಗಂಟೆ ಐದು ನಿಮಿಷ.

## ನೀವೂ ಬರೆಯಿರಿ

ಮೆಟ್ರೊಗೆ ಲೇಖನ, 'ಕ್ಯಾಂಪಸ್ ಕಲರವ' ಹಾಗೂ ಕುಂದುಕೊರತೆ ಕಳುಹಿಸಲು...

ವಿಳಾಸ: ಪ್ರಜಾವಾಣಿ 'ಮೆಟ್ರೊ' ವಿಭಾಗ, # 363, ಶ್ರೀಹರಿ ಕಾಂಪ್ಲೆಕ್ಸ್, ಸೀತಾವಿಲಾಸ ರಸ್ತೆ, ಚಾಮರಾಜಮೊಹಲ್ಲಾ, ಮೈಸೂರು–570024, mysoremetro@prajavani.co.in

ವಾಟ್ಸ್‌ಆ್ಯಪ್: 9513322937